**D**

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 21. 03. 2019 ] **ಸಂಕೇತ ಸಂಖ್ಯೆ : 01-K**

Date : 21. 03. 2019 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** | |
| | **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಅಮೇರಿಕ, ಕೆನಡಾ ದೇಶಗಳಲ್ಲಿ ಮನೆಗಳನ್ನು ಸಾಧಾರಣವಾಗಿ ಯಾವುದರಿಂದ ಕಟ್ಟಿರುತ್ತಾರೆ ? | |
| | ***ಉತ್ತರ :*** | |
| | ಅಮೇರಿಕ, ಕೆನಡಾ ದೇಶಗಳಲ್ಲಿ ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುತ್ತಾರೆ. | |
| 2. | ಧರ್ಮಗಳು ಹಾಕಿಕೊಟ್ಟಿರುವ ರತ್ನಪಾತ ಏನು ? | |
| | ***ಉತ್ತರ :*** | |
| | ಧರ್ಮಗಳು ಹಾಕಿಕೊಟ್ಟಿರುವ ರತ್ನಪಾತ ಸಾಧಕನಿಗೆ, ಅಂತರ್‌ಜೀವಿಗೆ ಯಾವ ತೊಂದರೆಯೂ ಆಗದಂತೆ ಸಮಾಜವೇ ನೋಡಿಕೊಳ್ಳಬೇಕು ಎಂದು ಹೇಳಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರ ಯಾರೊಳಗೆ ಸಂವಾದ ನಡೆಯಿತು ?<br>***ಉತ್ತರ :***<br>ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಭಕರು (ವೈಷ್ಣವರು) ಮತ್ತು ಭವ್ಯಜನಂಗಳು (ಜೈನರು) ಇವರೊಳಗೆ ಸಂವಾದ ನಡೆಯಿತು. | |
| 4. | ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?<br>***ಉತ್ತರ :***<br>ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು. | |
| 5. | ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು ?<br>***ಉತ್ತರ :***<br>ಮನೆಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ. | |
| 6. | ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?<br>***ಉತ್ತರ :***<br>ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ. | |
| 7. | ಘಟ ಸಂಭೂತ ಯಾರು ?<br>***ಉತ್ತರ :***<br>ಘಟ ಸಂಭೂತ ಎಂದರೆ ದ್ರೋಣ. | |
| 8. | ಗಾಂಡೀವಿ ಎಂಬ ಬಿರುದಾಂಕಿತರು ಯಾರು ?<br>***ಉತ್ತರ :***<br>ಗಾಂಡೀವಿ ಎಂಬ ಬಿರುದಾಂಕಿತರು ಅರ್ಜುನ. | |
| 9. | ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?<br>***ಉತ್ತರ :***<br>ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 10. | ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?<br>***ಉತ್ತರ :***<br>ಶಿವನಿಗೆ ಸತಿಪತಿಗಳೊಂದಾದ ಭಕ್ತಿ ಹಿತವೆನಿಸುತ್ತದೆ. | |
| 11. | ನದೀಜಲಗಳು ಏನಾಗಿವೆ ?<br>***ಉತ್ತರ :***<br>ನದೀಜಲಗಳು ಕಲುಷಿತಗೊಂಡಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 12. | ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು ಯಾರು ?<br>***ಉತ್ತರ :***<br>ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ. | |
| 13. | ದಾಹಗೊಂಡವರ ತನುವ ತಣಿಸಲು ಕವಯಿತ್ರಿ ಇಂದುಮತಿ ಲಮಾಣಿ ಅವರು ಏನಾಗಬಯಸಿದ್ದಾರೆ ?<br>***ಉತ್ತರ :***<br>ದಾಹಗೊಂಡವರ ತನುವ ತಣಿಸಲು ಕವಯಿತ್ರಿ ಸದಾ ಚಿಮ್ಮುತ್ತಲಿರುವ ಚಿಲುಮೆಯಾಗಬೇಕೆಂದು ಬಯಸಿದ್ದಾರೆ. | |
| 14. | ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?<br>***ಉತ್ತರ :***<br>ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಬೇಕೆಂದು ಬಯಸಿದ್ದಾರೆ. | |
| 15. | ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?<br>***ಉತ್ತರ :***<br>ಮುದ್ದು ಪಾರಿವಾಳಗಳ ಜೋಡಿ ದಟ್ಟಕಾಡಿನಲ್ಲಿದ್ದ ಒಂದು ಹೆಮ್ಮರದ ಹೊದರಿನಲ್ಲಿ ಸಂಸಾರ ಹೂಡಿತ್ತು. | |
| 16. | ಪಾರಿವಾಳ ಪದ್ಯದಲ್ಲಿ ಸು.ರಂ. ಎಕ್ಕುಂಡಿ ಅವರು ಏನನ್ನು ತೊರೆದು ಬಾಳಬೇಕು ಎಂದಿದ್ದಾರೆ ?<br>***ಉತ್ತರ :***<br>ಪಾರಿವಾಳ ಪದ್ಯದಲ್ಲಿ ಸು.ರಂ. ಎಕ್ಕುಂಡಿ ಅವರು ವ್ಯಾಮೋಹವನು ತೊರೆದು ಬಾಳಬೇಕು ಎಂದಿದ್ದಾರೆ. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳಾವುವು ?<br>***ಉತ್ತರ :***<br>ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ವೈಷ್ಣವರ ಕೈಯಲ್ಲಿ ಜೈನರ ಕೈಹಿಡಿದುಕೊಟ್ಟು ಜೈನದರ್ಶನಕ್ಕೆ ಈ ಮೊದಲಿನಂತೆಯೇ ಪಂಚ ಮಹಾವಾದ್ಯಗಳೂ, ಕಳಶವೂ ಸಲ್ಲಬೇಕೆಂದು ಶಾಸನ ಮಾಡಿದನು. ಅಲ್ಲದೆ ಮನೆಮನೆಗೆ ೧ ಹಣವನ್ನು ತೆರಿಗೆಯಾಗಿ ವಿಧಿಸಿ ಈ ರೀತಿ ಸಂಗ್ರಹಿಸಿದ ಹಣದಿಂದ ದೇವರ ಅಂಗರಕ್ಷೆಗಾಗಿ ಇಪ್ಪತ್ತು ಆಳುಗಳನ್ನು ನೇಮಿಸುವುದು, ಉಳಿದ ಹೊನ್ನಿನಿಂದ ಜೀರ್ಣವಾಗಿರುವ ಜಿನಾಲಯಗಳಿಗೆ ಸುಣ್ಣ–ಬಣ್ಣ ಬಳಿಸಿ ಜೀರ್ಣೋದ್ಧಾರ ಮಾಡಬೇಕೆಂದು ಆದೇಶ ನೀಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ?<br>***ಉತ್ತರ :***<br>ಸಂಪ್ರದಾಯವನ್ನು ವಿರೋಧಿಸುವವರ ಅಂದರೆ ನಾಸ್ತಿಕರ ಪಾಲಿಗೆ ಸಮುದ್ರದೊಳಗೆ ಕುದುರೆಯ ಮುಖದಿಂದ ಹೊರಟ ಬೆಂಕಿಯಂತೆ (ಮಹಾ ಬಡವಾ ಮುಖಾಗ್ನಿ) ಇರುವವರೂ, ಶ್ರೀರಂಗನಾಥಸ್ವಾಮಿಯ ಚರಣ ಕಮಲಗಳಿಗೆ ಮೂಲದಾಸರಾಗಿರುವವರೂ, ಶ್ರೀಮಹಾ ವಿಷ್ಣುವಿನ ಲೋಕವಾದ ವೈಕುಂಠಕ್ಕೆ ದಾರಿತೋರುವ ಮಾರ್ಗದರ್ಶಕರೂ ಹಾಗೂ ಯತಿ ಶ್ರೇಷ್ಠರಾದವರಿಗೆ ರಾಜನಂತೆ ಇರುವವರೋ ಅಂತಹ ಯತಿರಾಜ ರಾಜರಾದ ಶ್ರೀರಾಮಾನುಜಾಚಾರ್ಯರಿಗೆ ವಿಜಯವಾಗಲಿ ಎಂದು ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಕೊಂಡಾಡಲಾಗಿದೆ. | |
| 19. | ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆಯನ್ನು ತಿಳಿಸಿ.<br>***ಉತ್ತರ :***<br>ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ವಿಶ್ವೇಶ್ವರಯ್ಯನವರು ಅದನ್ನು ತಡೆಯಲು ಎರಡೂ ನದಿಗಳಿಗೆ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು. | |
| 20. | ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?<br>***ಉತ್ತರ :***<br>ಡಾ. ಅಶೋಕ ಪೈ ಅವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯವನ್ನು ಹೀಗೆ ಹೇಳಿದ್ದಾರೆ. ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾಗ, ಇನ್ನು ಕೆಲವರು ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತಿರುತ್ತಾರೆ. ಟೆಲಿವಿಷನ್‌ನಲ್ಲಿ ಬರುವ ಕೊಲೆಯ ದೃಶ್ಯ ನೋಡುತ್ತಿರುವವರ ದುಃಖದ ಭಾವನೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿನಲ್ಲೂ ದುಗುಡ ಉಂಟುಮಾಡುತ್ತದೆ. ನೃತ್ಯದ ದೃಶ್ಯ ಖುಷಿಯ ಭಾವನೆಯನ್ನು ಉಂಟುಮಾಡುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿರುವುದಿಲ್ಲ. ಒಂದು ಜೀವಿಗೆ ಆಗುವ ದುಃಖ–ದುಮ್ಮಾನ ಎಲ್ಲಾ ಜೀವಿಗಳಿಗೂ ಆಗುತ್ತದೆ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

21. ‘ವಚನಧರ್ಮ’ದ ಬಗೆಗೆ ದೇವನೂರರ ಅಭಿಪ್ರಾಯ ಏನು ?

***ಉತ್ತರ :***

ದೇವನೂರರು ಈ ಸಹಸ್ರಮಾನದಲ್ಲಿ ಕಾಣುವುದು ಹನ್ನೆರಡನೆಯ ಶತಮಾನದ ವಚನ ಆಂದೋಲನ. ಹುಡುಕಿದರೂ ಜಗತ್ತಿನಲ್ಲಿ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲ. ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ ಎಂದು ವಚನಧರ್ಮದ ಬಗ್ಗೆ ದೇವನೂರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

22. ಧರ್ಮಬುದ್ಧಿಗ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?

***ಉತ್ತರ :***

ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ವ್ಯಾಪಾರ ಮುಗಿಸಿಬಂದು ಮಧುರಾಪುರದ ಉದ್ಯಾನದಲ್ಲಿ ಬೀಡುಬಿಟ್ಟಿದ್ದರು. ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುಷ್ಟಬುದ್ಧಿಯನ್ನು ಕರೆದು ಸಂಪತ್ತನ್ನೆಲ್ಲ ಹಂಚಿಕೊಳ್ಳೋಣ ಎಂದಾಗ, ನಾವಿಬ್ಬರೂ ಈ ಸಂಪತ್ತನ್ನೆಲ್ಲ ಹಂಚಿಕೊಂಡು ಮನೆಯಲ್ಲಿಯೇ ಸ್ವತಂತ್ರವಾಗಿ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಸಂಪತ್ತನೆಲ್ಲ ಈ ವಟವೃಕ್ಷದ ಬುಡದಲ್ಲಿ ಹೂತಿಡೋಣ ಎಂದು ಧರ್ಮಬುದ್ಧಿಗೆ ದುಷ್ಟಬುದ್ಧಿ ಸಲಹೆಯಿತ್ತನು.

23. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

***ಉತ್ತರ :***

ಶಾನುಭೋಗರು ಹುಲಿಗೆ ಅಭಿಮುಖರಾಗದೆ ಹುಲಿಯ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೇ. ಶ್ರೀರಾಮನಂತಹ ದೊರೆಗಳು ಆಳಿದ ನಾಡಿನಲ್ಲಿ ಅಧರ್ಮಕ್ಕೆಡೆಗೊಡುವುದುಂಟೆ ? ಅಲ್ಲದೆ ಸದ್ವಂಶದಲ್ಲಿ ಜನಿಸಿದ ಹುಲಿಗೆ ಭಗವದ್ಗೀತೆ ಹಾಗೂ ಸತ್ಯವ್ರತೆಯಾದ ಪುಣ್ಯಕೋಟಿಯು ನೆನಪಿಗೆ ಬಂದಿತು. ಆದ್ದರಿಂದ ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.<br>***ಉತ್ತರ :***<br>ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಅದೇ ದಾರಿಯಲ್ಲಿ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿ ಇರುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದ, ರೈತರ ಮಾತು ಕೇಳಿ ಹುಲಿ ಓಡಿಹೋಯಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತ, ಪಂಜು ಹೊತ್ತಿಸಿಕೊಂಡು ಬರುತ್ತಿದ್ದಾಗ, ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರು ಹಾಕಿ ಎಚ್ಚರಿಸಿದರು. | |
| 25. | ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?<br>***ಉತ್ತರ :***<br>ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಆಡಳಿತದ ಸೂತ್ರ ಹಿಡಿದು ನಿಶ್ಶಸ್ತ್ರೀಕರಣ ಕಾಯಿದೆ ಹೇರಿದರು. ಇದರಂತೆ ಸರಕಾರದ ಅನುಮತಿಯಿಲ್ಲದೆ ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಇದ್ದ ಆಯುಧಗಳನ್ನು ಹಿಂದಿರುಗಿಸಬೇಕಾಯಿತು. ಹಲಗಲಿಯ ಬೇಡರು ಇದನ್ನು ವಿರೋಧಿಸುತ್ತಾರೆ. ಬೇಡರಾಗಿರುವುದರಿಂದ ಆಯುಧವಿಲ್ಲದೆ ಬದುಕುವುದು ಅಸಾಧ್ಯ. ಅಲ್ಲದೆ ಗುಲಾಮಗಿರಿಯನ್ನು ಒಪ್ಪಿಕೊಂಡಂತಾಗುತ್ತದೆ ಎಂದು ಕಾರಕೂನನ ಕಪಾಳಕ್ಕೆ ಹೊಡೆಯುತ್ತಾರೆ. ಸುದ್ದಿ ತಿಳಿದ ಸಾಹೇಬ ಮತ್ತಷ್ಟು ಸೈನ್ಯವನ್ನು ಕಳಿಸುತ್ತಾನೆ. ರಾಮ, ಬಾಲ, ಹನುಮ ಮೊದಲಾದ ವೀರರು ತಮ್ಮಲ್ಲಿದ್ದ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದರು. | |
| 26. | ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ ?<br>***ಉತ್ತರ :***<br>ಬಸವಣ್ಣನವರು ಮಾತಿನ ಮಹತ್ವವನ್ನು ಬಹಳ ಸುಂದರವಾಗಿ ಈ ರೀತಿ ವರ್ಣಿಸಿದ್ದಾರೆ. ಮನುಷ್ಯನಿಗೆ ಮಾತೇ ಮುತ್ತು; ಮಾತೇ ಮೃತ್ಯು. ನಾವು ಆಡುವ ಮಾತುಗಳು ಮುತ್ತಿನ ಹಾರದಂತೆ ಸ್ಫುಟವಾಗಿರಬೇಕು. ಮಾಣಿಕ್ಯದ ಬೆಳಕಿನಂತೆ ಸಂತೋಷವನ್ನುಂಟು ಮಾಡಬೇಕು. ನಮ್ಮ ಮಾತು ಸ್ಫಟಿಕದ ಶಲಾಕೆಯಂತೆ ಪಾರದರ್ಶಕವಾಗಿರಬೇಕು. ನಾವಾಡುವ ಮಾತು ಸತ್ಯವಾಗಿದ್ದು ಲಿಂಗವೇ ಮೆಚ್ಚಿ ಅಹುದಹುದೆನಬೇಕು. ಅಲ್ಲದೆ ನಾವು ನುಡಿದಂತೆಯೇ ನಡೆಯಬೇಕು. ಎಂದಿಗೂ ಮಾತಿಗೆ ತಪ್ಪಬಾರದು. ಆಗ ಮಾತ್ರ ಕೂಡಲ ಸಂಗಮ ದೇವನು ನಮಗೆ ಒಲಿಯುವನು. | |
| 27. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.<br>***ಉತ್ತರ :***<br>ರಘುವಂಶದ ರಾಜನಾದ ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ಪರಾಕ್ರಮಿಗಳಾದ ರಾಜರು ಕುದುರೆಗೆ ನಮಸ್ಕರಿಸಿ ಕಳುಹಿಸುತ್ತಿದ್ದರು. ಹೀಗೆ ಯಾಗದ ಕುದುರೆ ಭೂಮಿಯಲ್ಲಿ ಸಂಚರಿಸುತ್ತಾ ವಾಲ್ಮೀಕಿ ಮುನಿಯ ಆಶ್ರಮದ ಕಡೆಗೆ ಬರುತ್ತದೆ. ಮುನಿಯ ಆಶ್ರಮದ ವಿನಿಯೋಗಕ್ಕಾಗಿ ಇದ್ದ ಉದ್ಯಾನವನದಲ್ಲಿ ಬೆಳೆದಿದ್ದ ಹಸಿರು ಹುಲ್ಲನ್ನು ನೋಡಿ, ತಿನ್ನಲು ಬಯಸಿ ಯಜ್ಞಾಶ್ವವು ವಾಲ್ಮೀಕಿಯ ಆಶ್ರಮದ ವನವನ್ನು ಪ್ರವೇಶಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು ?<br>***ಉತ್ತರ :***<br>ಮನುಷ್ಯನೆಂಬುವನು ಈ ನೆಲಕ್ಕೆ ಮಾಲೀಕ ನಾನೇ ಎಂಬ ಅಮಲಿನಲ್ಲಿ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡಿದ್ದಾನೆ. ಈ ನೆಲ ನನ್ನದೆಂಬ ಅಹಂಕಾರದಿಂದ ಬೀಗುತ್ತಾ ಅದಕ್ಕಾಗಿ ಯುದ್ಧ ಮಾಡುತ್ತಾನೆ. ಆದರೆ ಹೀಗೆ ನಡೆಯುವ ಯುದ್ಧಗಳಲ್ಲಿ ಗಡಿಯ ಆಚೆ–ಈಚೆ ಹೋರಾಡುವ ಎಲ್ಲಾ ಯೋಧರೂ ಹೋರಾಡುತ್ತಾ ಜೀವ ಬಿಟ್ಟು ಶವಗಳಾಗುತ್ತಾರೆ. ಆದರೆ ಯಾವ ಜೀವಿಯೇ ಮರಣ ಹೊಂದಿದರೂ ಅವರಿಂದ ಹೊರಬರುವ ರಕ್ತವೊಂದೇ ಎಂಬ ಭಾವನೆ ಯಾರಿಗೂ ಇರುವುದಿಲ್ಲ. ಹೀಗೆ ಹೋರಾಡಿ ಸತ್ತವರು ವೀರಮರಣ ಹೊಂದುತ್ತಾರೆ. ಗೆದ್ದವರು ವೀರ ಯೋಧರೆಂದು ಬೀಗುತ್ತಾರೆ. ಹೀಗೆ ಗಡಿಯ ಆಚೆ–ಈಚೆ ಜೀವಿಗಳು ಶವವಾಗುತ್ತಿವೆ. | |
| 29. | ಮೂಢನಂಬಿಕೆಗಳ ಬಗ್ಗೆ ಎಚ್. ನರಸಿಂಹಯ್ಯ ಅವರ ಅಭಿಪ್ರಾಯವನ್ನು ತಿಳಿಸಿ.<br>***ಉತ್ತರ :***<br>ಎಚ್. ನರಸಿಂಹಯ್ಯ ಅವರು ನಮ್ಮ ದೇಶದಲ್ಲಿ ಮೂಢನಂಬಿಕೆಗಳು ತುಂಬಿ ತುಳುಕುತ್ತಿವೆ. ಈ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಮೂಢನಂಬಿಕೆಯನ್ನು ಹೊಂದಿರುವ ಅವಿದ್ಯಾವಂತನಿಗಿಂತಲೂ ಹೆಚ್ಚು ಅಪಾಯಕಾರಿ. ಈ ಗುಂಪಿನಲ್ಲಿ ಪ್ರಸಿದ್ಧ ಶಿಕ್ಷಣವೇತ್ತರೂ ಇದ್ದಾರೆ ಎನ್ನುವುದು ಖಂಡನಾರ್ಹ ಮೂಢನಂಬಿಕೆಗಳ ಬಗ್ಗೆ ತಳೆಯುವ ಉದಾಸೀನ ಭಾವ ಮತ್ತು ನಿಷ್ಕ್ರಿಯತೆ ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುತ್ತದೆ ಎಂದು ಹೇಳಿದ್ದಾರೆ. | |
| 30. | ಪಂಪನು ವೃಷಭಾಚಲದಲ್ಲಿ ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ ?<br>***ಉತ್ತರ :***<br>ಆದಿತೀರ್ಥಂಕರನ ಮಗ ಭರತ ಚಕ್ರವರ್ತಿ ಷಟ್ಖಂಡಗಳನ್ನು ಗೆದ್ದು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಸಲು ಹೋಗುತ್ತಾನೆ. ಅಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿ ಹೋಗಿದ್ದು ಭರತೇಶನಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳವೇ ದೊರಕುವುದಿಲ್ಲ. ಇದನ್ನು ಪಂಪ ಆದಿಪುರಾಣದಲ್ಲಿ ನಿರೂಪಿಸಿದ ಮೇಲೆ ಹೆಸರು ಕೊರೆಸುವುದು ವ್ಯರ್ಥ ಎಂಬ ಭಾವನೆ ಬಂದಿರಬಹುದು. ಅದಲ್ಲದೆ ಪಂಪನಿಗೆ ತನ್ನ ಹೆಸರು ಬಂಡೆಯ ಮೇಲೆ ಕೆತ್ತಿಸದಿದ್ದರೂ ಶತಮಾನಗಳ ಕಾಲ ಉಳಿಯುತ್ತದೆಂದು ತಿಳಿದಿದ್ದಿರಬಹುದು. ಆದ್ದರಿಂದ ವೃಷಭಾಚಲದಲ್ಲಿ ತನ್ನ ಹೆಸರನ್ನು ಕೆತ್ತಿಸಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?<br>***ಉತ್ತರ :***<br>ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಅವಶ್ಯಕ ಅಂಶವಲ್ಲವೆಂಬುದು ಗಾಂಧೀಜೀಯವರ ಭಾವನೆಯಾಗಿತ್ತು. ದಕ್ಷಿಣ ಆಫ್ರಿಕಾದ ಸುಶಿಕ್ಷಿತ ಯುವಕರ ಮತ್ತು ವಕೀಲರ ಸುಂದರವಾದ ಬರವಣಿಗೆಯನ್ನು ನೋಡಿದ ನಂತರ ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಗಿತ್ತು. ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ತಿಳಿದರು. ಬರಹವನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದರೂ ಕಾಲ ಮೀರಿ ಹೋಗಿತ್ತು. ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಬೇಕು ಎಂಬ ಅಭಿಪ್ರಾಯವನ್ನು ಗಾಂಧೀಜೀಯವರು ತಿಳಿಸಿದರು. | |
| 32. | 'ತಾವರೆಬೇರು' ಎಂಬ ಉತ್ತರ ಬರುವ ಒಗಟನ್ನು ಬರೆಯಿರಿ.<br>***ಉತ್ತರ :***<br>"ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು<br>ಅದು ಒಂದು ಗಿಡದ ಪರಿಕಾರ – ಎಲೆಬಾಲೆ<br>ಬಾಲೆ ನಮ್ಮರ್ಥ ಒಡೆದ್ಹೇಳಿ"<br>ಇದು ತಾವರೆಯಬೇಕು ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ. | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | $6 \times 3 = 18$ |
| | ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು 'ಗೊರೂರು ರಾಮಸ್ವಾಮಿ ಅಯ್ಯಂಗಾರ್' ಅವರು ರಚಿಸಿರುವ 'ಅಮೆರಿಕದಲ್ಲಿ ಗೊರೂರು' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ಅಮೆರಿಕದಲ್ಲಿ ಗೊರೂರು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಗೊರೂರರು ತಾವು ಇದ್ದ ಮನೆಯ ಮೂಲೆಯಿಂದ ಇದ್ದಕ್ಕಿದ್ದಂತೆ ಕೊಂಬಿನ ಸದ್ದು ಬಂದಾಗ ಅದು ಯಾವುದೆಂದು ತಿಳಿಯದೆ ಸಹಾಯ ಪಡೆಯಲು ಮನೆಯ ಎದುರುಗಿದ್ದ ಶಾಲೆಯೊಳಗೆ ಹೋದರು. ಅಲ್ಲಿದ್ದ ಮಕ್ಕಳೂ, ಶಿಕ್ಷಕರೂ ಆಶ್ಚರ್ಯದಿಂದ ಗೊರೂರರನ್ನು ನೀವು ಎಲ್ಲಿಂದ ಬಂದಿರುವಿರಿ ಎಂದು ಕೇಳಿದಾಗ "ನೀವು ಗಾಂಧೀ ಹೆಸರು ಕೇಳಿರುವಿರಾ ?" ಎಂದು ಪ್ರಶ್ನಿಸಿದಾಗ ಒಬ್ಬ ವಿದ್ಯಾರ್ಥಿ ಈ ಮೇಲಿನಂತೆ ಹೇಳಿದನು.<br>***ಸ್ವಾರಸ್ಯ :*** ವಿದ್ಯಾರ್ಥಿಗಳ ಕುತೂಹಲ ಮತ್ತು ಗಾಂಧೀಜೀಯವರ ಜನಪ್ರಿಯತೆ ಈ ವಾಕ್ಯದಲ್ಲಿ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು 'ಡಿ.ಎಸ್. ಜಯಪ್ಪಗೌಡ' ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಪಂಡಿತ್ ಜವಾಹರಲಾಲ್ ನೆಹರೂ ಅವರು ವಿಶ್ವೇಶ್ವರಯ್ಯನವರ ಕಾರ್ಯವೈಖರಿಯನ್ನು ಪ್ರಶಂಸಿಸುತ್ತಾ ತಮ್ಮ ಭಾಷಣದಲ್ಲಿ ಈ ಮೇಲಿನಂತೆ ಹೇಳಿದರು.<br>***ಸ್ವಾರಸ್ಯ :*** "ಮಾತಿಗಿಂತ ಕೃತಿಲೇಸು" ಎಂಬ ಗಾದೆಯಂತೆ ಸರ್ ಎಂ. ವಿಶ್ವೇಶ್ವರಯ್ಯನವರು ಶಿಸ್ತು, ದಕ್ಷತೆ, ಪ್ರಾಮಾಣಿಕತೆ ಮತ್ತು ಕರ್ತವ್ಯಪರತೆ ಇವೇ ಮೊದಲಾದ ಗುಣಗಳನ್ನು ಹೊಂದಿರುವುದನ್ನು ಪ್ರಧಾನ ಮಂತ್ರಿಗಳಾದಿಯಾಗಿ ಎಲ್ಲರೂ ಗೌರವಿಸುತ್ತಿದ್ದ ರೀತಿ ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| 35. | "ಹುಸಿಯದ ಬೇಹಾರಿಯೇ ಇಲ್ಲ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು 'ದುರ್ಗಸಿಂಹ' ಕವಿಯು ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಧರ್ಮಾಧಿಕಾರಿಗಳು ಸಾಕ್ಷಿಯನ್ನು ಕೇಳಲು ವಟವೃಕ್ಷದ ಬಳಿಬಂದಾಗ, ವಟವೃಕ್ಷದ ಪೊಟರೆಯೊಳಗೆ ಕುಳಿತಿದ್ದ ಪ್ರೇಮಮತಿಯು ಧರ್ಮಬುದ್ಧಿಯೇ ಧನವನ್ನು ಕೊಂಡೊಯ್ದನೆಂದು ಹೇಳಿದಾಗ ಧರ್ಮಬುದ್ಧಿಯು ಆಶ್ಚರ್ಯಪಟ್ಟು ಇಲ್ಲಿ ಏನೋ ಮೋಸವಿದೆಯೆಂದು ತಿಳಿದು ಮರವನ್ನು ಸುತ್ತುವರಿದು ಬಂದು ಮನುಷ್ಯ ಸಂಚಾರವಾಗಿರುವುದನ್ನು ಗಮನಿಸಿ ಧರ್ಮಾಧಿಕಾರಿಗಳಿಗೆ ಈ ಮೇಲಿನಂತೆ ಹೇಳಿದನು.<br>***ಸ್ವಾರಸ್ಯ :*** ದುಷ್ಟಬುದ್ಧಿಯ ಕೆಟ್ಟ ಆಲೋಚನೆ ಮತ್ತು ಧರ್ಮಬುದ್ಧಿಯ ಚತುರತೆ ಹಾಗೂ ವ್ಯಾಪಾರಿಗಳ ಮನೋಭಾವ ಈ ವಾಕ್ಯದಲ್ಲಿ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು ಜೇಡರದಾಸಿಮಯ್ಯನ ವಚನಗಳನ್ನು ಫ.ಗು. ಹಳಕಟ್ಟಿ ಅವರು ಸಂಪಾದಿಸಿರುವ 'ದಾಸಿಮಯ್ಯನ ವಚನಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ವಚನಸೌರಭ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಜೇಡರದಾಸಿಮಯ್ಯನವರು ನಿಜವಾದ ಭಕ್ತಿ ಎಂದರೇನು ? ಭಕ್ತನಾದವನು ಹೊಂದಿರಬೇಕಾದ ಗುಣಗಳು ಯಾವುವು ? ಎಂಬುದನ್ನು ತಿಳಿಸುವಾಗ ನಿಷ್ಠೆಯ ಮಹತ್ವವನ್ನು ಈ ರೀತಿ ತಿಳಿಸಿದ್ದಾರೆ.<br>***ಸ್ವಾರಸ್ಯ :*** ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಟ ಜೀವನ ಮೌಲ್ಯಗಳು ಭಕ್ತಿಯ ಸಾಕಾರಕ್ಕೆ ನಿಷ್ಠೆ ಮುಖ್ಯ ಎಂಬುದು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| 37. | "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು 'ಡಾ. ಬಿ.ಎಸ್. ಗದ್ದಗಿಮಠ' ಅವರ ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ಸಂಪಾದಿಸಿದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಹಲಗಲಿಯ ಬೇಡರು ಬ್ರಿಟಿಷರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ವಿರೋಧಿಸಿ ದಂಗೆ ಎದ್ದರು. ಇವರನ್ನು ಹತ್ತಿಕ್ಕಲು ಬ್ರಿಟಿಷ್ ಅಧಿಕಾರಿಗಳು ಅಶ್ವಸೇನೆಯನ್ನು ಕಳುಹಿಸಿದರು. ಹಲಗಲಿಯ ವೀರರು ಅವರನ್ನು ಎದುರಿಸಿ "ಹೆಬಲಕ್" ಎಂಬ ಅಧಿಕಾರಿಯನ್ನು ಕೊಂದು ಹಾಕಿದರು. ಕೋಪಗೊಂಡ 'ಕಾರ' ಸಾಹೇಬ ಕಾಗದ ಬರೆದು ದೊಡ್ಡ ಸೇವೆಯನ್ನು ಕರೆಯಿಸಿಕೊಂಡು ಹಲಗಲಿಯ ಬೇಡರ ದಂಗೆಯನ್ನು ಹತ್ತಿಕ್ಕಲು ಆದೇಶಿಸಿದನು. ಬ್ರಿಟಿಷ್ ಸೈನಿಕರು ಕರುಣೆ ತೋರದೆ ಹಲಗಲಿಯ ಬೇಡರನ್ನು ಬೆನ್ನತ್ತಿ ಹೋಗಿ ಯಾರೂ ಉಳಿಯದಂತೆ ಗುಂಡು ಹಾರಿಸಿ ಕೊಂದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>***ಸ್ವಾರಸ್ಯ :*** ಬ್ರಿಟಿಷರ ಕ್ರೌರ್ಯ ಮತ್ತು ದೌರ್ಜನ್ಯಗಳು ಅಭಿವ್ಯಕ್ತಗೊಂಡಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ಜಾನಕಿಯ ಮಗನಿದಕೆ ಬೆದರುವನೆ"<br>***ಉತ್ತರ :***<br>***ಆಯ್ಕೆ :*** ಈ ವಾಕ್ಯವನ್ನು 'ಲಕ್ಷ್ಮೀಶ' ಕವಿಯು ರಚಿಸಿರುವ 'ಜೈಮಿನಿ ಭಾರತ' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ಸುತ್ತಾಡುತ್ತಾ ಹಸುರಾದ ಹುಲ್ಲನ್ನು ಅರಸಿ ವಾಲ್ಮೀಕಿ ಋಷಿಗಳ ಆಶ್ರಮಕ್ಕೆ ಬರುತ್ತದೆ. ತೋಟದ ಕಾವಲಿಗಾಗಿ ನೇಮಿಸಿದ್ದ ಲವನು ಆ ಕುದುರೆಯನ್ನು ನೋಡಿ ಹತ್ತಿರ ಬಂದು ಅದರ ಹಣೆಯ ಮೇಲಿದ್ದ ಲಿಖಿತವನ್ನೋದಿ ಕೋಪಗೊಂಡು ತನ್ನ ಉತ್ತರೀಯದಿಂದ ಆ ಯಜ್ಞದ ಕುದುರೆಯನ್ನು ಬಾಳೆಯ ಗಿಡಕ್ಕೆ ಕಟ್ಟಿಹಾಕುತ್ತಾನೆ. ಆಗ ಅದನ್ನು ಕಂಡು ಹೆದರಿದ ಮುನಿಸುತರು "ಬೇಡ ಬೇಡ ಇದು ರಾಜರ ಕುದುರೆ ಇದನ್ನು ತಿಳಿದರೆ ನಮ್ಮನ್ನು ಶಿಕ್ಷಿಸುವರು" ಎನಲು ಆಗ ಲವನು ನಗುತ್ತಾ ಪಾರ್ವರ ಮಕ್ಕಳು ನೀವು ಹೆದರಿದರೆ ಜಾನಕಿಯ ಮಗನಾದ ನಾನು ಹೆದರುವುದಿಲ್ಲ ಎಂದು ಹೇಳುತ್ತಾನೆ.<br>***ಸ್ವಾರಸ್ಯ :*** ವೀರಲವನ ಕ್ಷತ್ರಿಯ ಸಹಜ ಗುಣಗಳಾದ ವೀರತನ, ಶೌರ್ಯ, ಪರಾಕ್ರಮಗಳು ಅಭಿವ್ಯಕ್ತಗೊಂಡಿದೆ.<br>**ಕವಿ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ / ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ವಿ.ಕೃ. ಗೋಕಾಕ್ :<br>***ಉತ್ತರ :***<br>'ವಿನಾಯಕ' ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಇವರು ಹಾವೇರಿ ಜಿಲ್ಲೆಯ ಸವಣೂರಿನವರು. ಕಾಲ ಕ್ರಿ.ಶ. ೧೯೦೯. ನವ್ಯ ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಇವರು ಜೀವನ ಪಾಠಗಳು, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ದ್ಯಾವ ಪೃಥಿವಿ, ಸಮರಸವೇ ಜೀವನ, ಭಾರತ ಸಿಂಧು ರಶ್ಮಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಲಭಿಸಿದೆ. ಪದ್ಮಶ್ರೀ ಪುರಸ್ಕಾರಪಡೆದ ಇವರು ಜ್ಞಾನಪೀಠ ಪ್ರಶಸ್ತಿಗೂ ಭಾಜನರಾಗಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಆದಿಕವಿ ಪಂಪ :<br>***ಉತ್ತರ :***<br>ಪಂಪ ಮಹಾಕವಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದವನು. ಈತನ ಕಾಲ ಕ್ರಿ.ಶ. ೯೪೧. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಪಂಪ ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯಂ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಕಲಿಯೂ, ಕವಿಯೂ ಆಗಿದ್ದ ಪಂಪ ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಸರಸ್ವತೀಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ ಎಂಬ ಬಿರುದುಗಳನ್ನು ಪಡೆದಿದ್ದ ಕವಿ. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ನೀಲಮೇಘ ಮಂಡಲ ..........................................<br>..................................................................<br>..................................................................<br>..................................................................<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಅಥವಾ***<br>ಯುಗ–ಯುಗಗಳ ..............................................<br>..................................................................<br>..................................................................<br>..................................................................<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಉತ್ತರ :***<br>ನೀಲಮೇಘ ಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ? | 1 × 4 = 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ.

***ಉತ್ತರ :***

ಪ್ರಸ್ತುತ ಪದ್ಯಭಾಗವು 'ಕುಮಾರವ್ಯಾಸ' ಕವಿ ವಿರಚಿತ 'ಕರ್ಣಾಟಭಾರತಕಥಾಮಂಜರಿ' ಕಾವ್ಯದಿಂದ ಆಯ್ದುಕೊಳ್ಳಲಾಗಿರುವ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಪಾಂಡವರ ರಾಯಭಾರಿಯಾಗಿ ಸಂಧಿಗಾಗಿ ದುರ್ಯೋಧನನ ಆಸ್ಥಾನಕ್ಕೆ ಬರುತ್ತಾನೆ. ಸಂಧಿ ವಿಫಲವಾದಾಗ ರಾಜಸಭೆಯಲ್ಲಿ ತನ್ನ ವಿಶ್ವರೂಪವನ್ನು ತೋರಿಸಿ ಹೊರಗೆ ಹೋಗುವಾಗ ಕರ್ಣನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಕರ್ಣನಿಗೆ ಅವನ ಜನ್ಮರಹಸ್ಯವನ್ನು ವಿವರವಾಗಿ ತಿಳಿಸುತ್ತಾನೆ. ಭೇದೋಪಾಯಗಳಿಂದ ಆಮಿಷಗಳನ್ನು ಒಡ್ಡಿ ಕರ್ಣನನ್ನು ಮನವೊಲಿಸಲು ಪ್ರಯತ್ನಿಸುತ್ತಾನೆ. ಒಡೆಯನಾದ ದುರ್ಯೋಧನನ ಮೇಲೆ ಅಪಾರವಾದ ಸ್ನೇಹ, ವಿಶ್ವಾಸಗಳನ್ನು ಹೊಂದಿದ್ದ ಕರ್ಣ ಕೃಷ್ಣನ ಆಮಿಷಗಳನ್ನು ತಿರಸ್ಕರಿಸುತ್ತಾನೆ. ಪಾಂಡವರು ತನ್ನ ಸಹೋದರರೆಂದು ತಿಳಿದ ಕರ್ಣ ಅಂತಿಮವಾಗಿ ಈ ನಿರ್ಧಾರಕ್ಕೆ ಬರುತ್ತಾನೆ.

ಎಲೈ ಕೃಷ್ಣ ನಾಳೆ ನಡೆಯಲಿರುವ ಕುರುಕ್ಷೇತ್ರ ಮಹಾಸಮರದಲ್ಲಿ ನಾನು ಯುದ್ಧ ಮಾಡಿಯೇ ತೀರುತ್ತೇನೆ. ಪಾಂಡವರ ಸೈನ್ಯದ ಆನೆ, ಕುದುರೆ, ರಥ ಹಾಗೂ ಯೋಧರನ್ನೊಳಗೊಂಡ ಚತುರಂಗ ಬಲವನ್ನು ನಾಶಪಡಿಸುತ್ತೇನೆ. ರಣರಂಗದಲ್ಲಿ ಅಸಂಖ್ಯಾತ ವೀರ ಯೋಧರನ್ನು ಕೊಂದು ಮೃತ್ಯುದೇವತೆಗೆ ಭೋಜನಕೂಟವನ್ನು ಏರ್ಪಡಿಸುತ್ತೇನೆ. ಈ ಮೂಲಕ ನನ್ನ ಒಡೆಯನಾದ ಕೌರವನ ಅನ್ನದ ಋಣವನ್ನು ತೀರಿಸುತ್ತೇನೆ. ಹೀಗೆ ಹೋರಾಡುತ್ತಲೇ ನನ್ನ ಒಡೆಯನಾದ ದುರ್ಯೋಧನನ ಒಳಿತಿಗಾಗಿ ಅನಿವಾರ್ಯವಾಗಿ ನನ್ನ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಶರೀರವನ್ನು ಬಳಸುತ್ತೇನೆ. ನನ್ನ ತಂದೆಯಾದ ಸೂರ್ಯದೇವನ ಮೇಲೆ ಆಣೆ ಮಾಡಿ ಹೇಳುತ್ತೇನೆ. ಈ ಯುದ್ಧದಲ್ಲಿ ನಿನ್ನ ವೀರರಾದ ಪಂಚ ಪಾಂಡವರನ್ನು ಯಾವುದೇ ಕಾರಣಕ್ಕೂ ಕೊಲ್ಲುವುದಿಲ್ಲ. | |
| | ಈ ಪದ್ಯಭಾಗದಲ್ಲಿ ದಾನಶೂರನೆಂದೇ ಪ್ರಸಿದ್ಧನಾದ ಕರ್ಣನಿಗೆ ತನ್ನ ಒಡೆಯನಾದ ದುರ್ಯೋಧನನ ಮೇಲಿದ್ದ ಸ್ವಾಮಿಭಕ್ತಿ, ಸ್ನೇಹ ಹಾಗೂ ಪಾಂಡವರ ಮೇಲಿದ್ದ ಭ್ರಾತೃವಾತ್ಸಲ್ಯ, ಹೆಚ್ಚಾಗಿ ಕ್ಷತ್ರಿಯನಾದವನಿಗೆ ಶೌರ್ಯ, ಪರಾಕ್ರಮಗಳೇ ಆಭರಣಗಳು ಎಂಬ ಇದೇ ಮೊದಲಾದ ಮೌಲ್ಯಯುತ ಗುಣಗಳು ಅಭಿವ್ಯಕ್ತಗೊಂಡಿವೆ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.<br>***ಅಥವಾ***<br>ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ? | |
| | ***ಉತ್ತರ :*** | |
| | ಶಬರಿಯು ರಾಮಲಕ್ಷ್ಮಣರನ್ನು ಕಂಡು ಹಿಗ್ಗಿ, ಸಂತೋಷದಿಂದ ರುಚಿಕರವಾದ ಹಣ್ಣುಗಳನ್ನು, ಮಧುಪರ್ಕವನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡು ನಾನು ಪರಮ ಸುಖಿ ಎಂದು ನರ್ತಿಸುತ್ತಾಳೆ. ರಾಮನೂ ಸಹಾ ಆನಂದದಿಂದ "ನಿನ್ನ ಪ್ರೀತಿಯ ಸತ್ಕಾರದಿಂದ ನಾವು ಸುಖಿ ನಾವು ನಿನಗೆ ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದುಬಂದು ನನಗೆ ಸಂತಸ ನೀಡಿದಿರಿ. ನಿಮ್ಮ ಹಸಿವು, ತೃಷೆ ಹಿಂಗಿತೆ ? ನಾನೊಬ್ಬಳು ಬಡವಿ ನನ್ನ ಮೇಲೆ ಮರುಕ ತೋರಿದಿರಾ ?" ಎನ್ನುತ್ತಾಳೆ. ಆಗ ಶ್ರೀರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ. ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚಂದ. ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು ರಾಮ ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರವಾಗಿದೆ. ನಾನು ಧನ್ಯಳಾದೆ. ಇಂದು ಸಿದ್ಧರ ವರ ನನಗೆ ಫಲಿಸಿತು. ಗುರುಪೂಜೆಯನ್ನು ಮಾಡಿದ ಪುಣ್ಯ ಇಂದು ನನಗೆ ಲಭಿಸಿತು. ನನ್ನ ಚಿಂತೆಯಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ. ಶ್ರೀರಾಮನು "ದುಃಖವನ್ನು ಮರೆಯಿಸಿ ಶಾಂತಿ ನೀಡುವ ಈ ವನದಲ್ಲಿ ಶುದ್ಧ ಪ್ರೇಮಮೂರ್ತಿ ನೀನು" ಎಂದು ಶಬರಿಯನ್ನು ಮನಸಾರೆ ಹೊಗಳುತ್ತಾನೆ. ಹೀಗೆ ಶಬರಿಯ ಚಿಂತೆ ಹಿಂಗಿ ಹೋಗುತ್ತದೆ. | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಶ್ರೀರಾಮನು ತನ್ನ ಆಶ್ರಮದಲ್ಲಿ ಬಂದು ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಏನು ಸಿದ್ಧತೆಯೆ ಇಲ್ಲವಲ್ಲ! ನಿನ್ನೆಯಷ್ಟೂ ಸಿದ್ಧತೆಯು ಇಂದು ಇಲ್ಲವಲ್ಲ ಎಂದು ಹಂಬಲಿಸಿದಳು. ತನ್ನ ಮನೋಭಿಲಾಷೆಯಂತೆ ವಿವಿಧ ರೀತಿಯ ಪರಿಮಳವನ್ನು ಸೂಸುತ್ತಿರುವ ಪುಷ್ಪಗಳಿಂದ ಸಿದ್ಧಪಡಿಸಿದ ವನಮಾಲೆಯನ್ನು ರಾಮನ ಕೊರಳಿಗಿಟ್ಟು ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತಾ ಇದನ್ನು ನಿಮಗಾಗಿ ತಂದೆನೆಂದು ರಾಮನಿಗೆ ಸಮರ್ಪಿಸಿದಳು. ಶಬರಿಯ ಆತಿಥ್ಯದಿಂದ ರಾಮನು ಸುಪ್ರಸನ್ನನಾದನು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸವನ್ನು ಬೀರಿದರು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ. | |
| 44. | ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ ?<br>***ಅಥವಾ***<br>ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ನಿಮ್ಮ ಮಾತಿನಲ್ಲಿ ವಿವರಿಸಿ.<br>***ಉತ್ತರ :***<br>ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರದ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ, ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನೆಡೆಸಬೇಕು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ದೀಕರಿಸುವ ಮುಂಗಾರಿನ ಮಳೆಯಾಗಬೇಕು. ಬರಡಾಗಿರುವ ಕಾಡುಮೇಡುಗಳು ಹಚ್ಚಹಸುರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತ ಕಾಲವಾಗಬೇಕು. ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರಗಳಿಂದ ಕಲುಷಿತವಾಗಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮುಕ್ತಗೊಳಿಸಬೇಕು. ಜಾತಿ, ಮತ, ಧರ್ಮ ಹಾಗೂ ಭಾಷೆಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಡ್ಡಗೋಡೆಗಳನ್ನು ಕೆಡವಿ ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು. ಎಲ್ಲಾ ಮತಗಳೂ ಸಾಧನೆಯ ಪಥಗಳಾಗಿವೆ ಎಂಬ ಧನಾತ್ಮಕ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಹೊಸ ಎಚ್ಚರದಿಂದ ಐಕ್ಯ ಮನೋಭಾವದಿಂದ ಕ್ರಿಯಾಶೀಲರಾಗಿ ಬದುಕಬೇಕು. ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲಿ ಭವಿಷ್ಯದ ಹೊಂಗನಸು ಕಾಣುವಂತಾಗಬೇಕು. ಇವೆಲ್ಲವೂ ಆಗುವಂತೆ ದೃಢಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.<br>***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವುದರಿಂದ ದ್ವೇಷರಹಿತ ಸಮಾಜವನ್ನು ನಿರ್ಮಾಣ ಮಾಡಬಹುದು. ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನೆಡೆಯುವುದರಿಂದ ಎಂತಹ ಸವಾಲುಗಳನ್ನೂ ಧೈರ್ಯವಾಗಿ ಎದುರಿಸಬಹುದು. ಮುಂಗಾರಿನ ಮಳೆಯಂತೆ ಪರಿಸರವನ್ನು ಸಂರಕ್ಷಿಸುವುದರಿಂದ ನದೀಜಲಗಳನ್ನು ಶುದ್ಧವಾಗಿಟ್ಟುಕೊಳ್ಳಬಹುದು. ವನ ಸಂರಕ್ಷಣೆ ಮಾಡುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ಹೊಸ ಭರವಸೆಯನ್ನು ಮೂಡಿಸುವುದರಿಂದ ಕಲುಷಿತವಾಗಿರುವ ಸಮಾಜವನ್ನು ಸುಧಾರಿಸಬಹುದು. ನಾವೆಲ್ಲರೂ ಒಂದೇ ಎಂಬ ಐಕ್ಯ ಮನೋಭಾವನೆಯನ್ನು ಬೆಳೆಸಿಕೊಳ್ಳುವುದರಿಂದ ಮನುಜ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಬಹುದು. ಎಲ್ಲಾ ಮತ–ಧರ್ಮಗಳ ಪಥಗಳು ಸಾಧನೆಯ ಮಾರ್ಗಗಳು ಎಂಬ ಎಚ್ಚರದಲ್ಲಿ ಬದುಕುವುದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವುದರಿಂದ ಉತ್ತಮ ಭವಿಷ್ಯದ ಹೊಂಗನಸು ಕಾಣಬಹುದು. ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಸಂಕಲ್ಪ ಮತ್ತು ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. | |
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| | ಪ್ರಪಂಚ ಸುಖ–ದುಃಖಗಳ ಆಗರ. ಕೇವಲ ಸುಖ, ಕೇವಲ ದುಃಖ ಯಾವ ಪ್ರಾಣಿ ಜೀವನದಲ್ಲಿಯೂ ಇಲ್ಲ. ಸುಖ–ದುಃಖಗಳಿಗೆ ಮನವೇ ಮೂಲ. ನಗೆ ವಿಶ್ವವ್ಯಾಪಕ. ಅದು ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳಲ್ಲೆಲ್ಲ ಹಬ್ಬಿಕೊಂಡಿದೆ. ದೇವಾನುದೇವತೆಗಳೂ, ಮಾನವರೂ, ಪ್ರಾಣಿಗಳು ನಗುತ್ತವೆ. ಒಟ್ಟಿನಲ್ಲಿ ನಗದಿರುವ ಜೀವಿಯೇ ಇಲ್ಲ.<br><br>ನಗೆಯ ಧ್ವನಿ ವಿಚಿತ್ರ. ಆ ವಿಚಿತ್ರ ನಗೆಯಲ್ಲಿ ವಿವಿಧ ಸ್ವರಗಳನ್ನು ಗುರುತಿಸಬಹುದು. ಕೆಲವರು ನಗುವಾಗ ದಡಬಡ ಸಪ್ಪಳ ಕೇಳಿಬರುತ್ತದೆ. ಕೆಲವರು ನಗುವಾಗ ಕೋಳಿಯಂತೆ ಕ್ಲಕ್–ಕ್ಲಕ್ ಎಂದು ನಿನಾದ ಮಾಡುವುದುಂಟು. ಕೆಲವರ ನಗೆಯಲ್ಲಿ ಹದ್ದಿನ ಸ್ವರ ಕೇಳಿಬರುತ್ತದೆ. ಬಂಡೆಗಲ್ಲಿನ ಮೇಲೆ ನೀರು ಹರಿದಂತೆ ಗುಳುಗುಳು ಧ್ವನಿಯೊಡನೆ ನಗುವವರೂ ಇದ್ದಾರೆ. ಕೆಲವರ ನಗೆ ಕುದುರೆ ಹೇಂಕರಿಸಿದಂತೆ, ಹಲವರದು ಹಂದಿ ಹೂಂಕರಿಸಿದಂತೆ. ಇನ್ನೂ ಕೆಲವರದು ದಮ್ಮು ರೋಗಿ ಉಸಿರಾಡಿಂತೆ; ಅತ್ತಂತೆ ನಗುವವರೂ ಇದ್ದಾರಿ. ಸಾಮಾನ್ಯವಾಗಿ ಜಗತ್ತಿನಲ್ಲಿ ಕೇಳಿಬರುವ ಸರ್ವಸ್ವರಗಳೂ ನಗೆಯಲ್ಲಿ ವ್ಯಕ್ತವಾಗುತ್ತವೆ. ನಕ್ಕಾಗ ಮುಖ ಅರಳುತ್ತದೆ. ತುಟಿಯ ಕವಾಟ ತೆರೆಯುತ್ತದೆ. ದಾಳಿಂಬದ ಬೀಜದಂತಿರುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹಲ್ಲುಗಳು ಶುಭ್ರ ಪ್ರಕಾಶ ಬೀರುತ್ತವೆ. ಹಲ್ಲು ಇಲ್ಲದವರ ಗತಿಯೇನು ? ಹಲ್ಲಿಲ್ಲದ ಬಾಯಿ ಇಲಿಯ ಬಿಲದಂತೆ. ನಕ್ಕಾಗ ಗಲ್ಲಗಳೆರಡೂ ಉಬ್ಬಿ ಕಿತ್ತಳೆ ಹಣ್ಣಿನಂತಾಗುತ್ತದೆ. ಹೃದಯ ಉಕ್ಕಿ ಬಂದು ಸ್ವರ ಗದ್ಗದಿತವಾಗುತ್ತದೆ. ಮೂಕದನಿ ಮುಗಿಲಿಗೇರುವುದು. ನಕ್ಕಷ್ಟೂ ನಗೆ ಹೆಚ್ಚಾಗುವುದು. ನವಿರು ನವಿರಾಗಿ ಹೊರಬರುವ ನಗೆಯ ಪದರು ಅಗಣಿತ ಅನಂತ.<br><br>*ಪ್ರಶ್ನೆಗಳು :*<br>ಅ) ನಕ್ಕಾಗ ಮುಖದಲ್ಲಿ ಆಗುವ ಬದಲಾವಣೆಗಳನ್ನು ತಿಳಿಸಿ.<br>ಆ) ನಗೆಯಿಂದ ಹೊರಡುವ ವಿವಿಧ ಸ್ವರಗಳು ಯಾವುವು ?<br><br>***ಉತ್ತರ :***<br>ಅ) ನಕ್ಕಾಗ ಮುಖ ಅರಳುತ್ತದೆ. ತುಟಿಯ ಕವಾಟ ತೆರೆಯುತ್ತದೆ. ದಾಳಿಂಬದ ಬೀಜದಂತಿರುವ ಹಲ್ಲುಗಳು ಶುಭ್ರ ಪ್ರಕಾಶ ಬೀರುತ್ತವೆ. ನಕ್ಕಾಗ ಗಲ್ಲಗಳೆರಡೂ ಉಬ್ಬಿ ಕಿತ್ತಳೆ ಹಣ್ಣಿನಂತಾಗುತದೆ. ಹೃದಯ ಉಕ್ಕಿ ಬಂದು ಸ್ವರ ಗದ್ಗದಿತವಾಗುತ್ತದೆ. ಮೂಕದನಿ ಮುಗಿಲಿಗೇರುವುದು.<br>ಆ) ನಗೆಯ ಧ್ವನಿ ವಿಚಿತ್ರ. ಆ ವಿಚಿತ್ರ ನಗೆಯಲ್ಲಿ ವಿವಿಧ ಸ್ವರಗಳನ್ನು ಗುರುತಿಸಬಹುದು. ಕೆಲವರು ನಗುವಾಗ ದಡಬಡ ಸಪ್ಪಳ ಕೇಳಿಬರುತ್ತದೆ. ಕೆಲವರು ನಗುವಾಗ ಕೋಳಿಯಂತೆ ಕ್ಲಕ್–ಕ್ಲಕ್ ಎಂದು ನಿನಾದ ಮಾಡುವುದುಂಟು. ಕೆಲವರ ನಗೆಯಲ್ಲಿ ಹದ್ದಿನ ಸ್ವರ ಕೇಳಿಬರುತ್ತದೆ. ಬಂಡೆಗಲ್ಲಿನ ಮೇಲೆ ನೀರು ಹರಿದಂತೆ ಗುಳುಗುಳು ಧ್ವನಿಯೊಡನೆ ನಗುವವರೂ ಇದ್ದಾರೆ. ಕೆಲವರ ನಗೆ ಕುದುರೆ ಹೇಂಕರಿಸಿದಂತೆ, ಹಲವರದು ಹಂದಿ ಹೂಂಕರಿಸಿದಂತೆ. ಇನ್ನೂ ಕೆಲವರದು ದಮ್ಮು ರೋಗಿ ಉಸಿರಾಡಿಂತೆ; ಅತ್ತಂತೆ ನಗುವವರೂ ಇದ್ದಾರೆ. ಸಾಮಾನ್ಯವಾಗಿ ಜಗತ್ತಿನಲ್ಲಿ ಕೇಳಿಬರುವ ಸರ್ವಸ್ವರಗಳೂ ನಗೆಯಲ್ಲಿ ವ್ಯಕ್ತವಾಗುತ್ತವೆ. | |
| | **ವಿಭಾಗ – 'ಬಿ'**<br>**(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)**<br>**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $10 \times 1 = 10$ |
| 46. | 'ಜಿನಾಲಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ವೃದ್ಧಿ ಸಂಧಿ (ಬಿ) ಸವರ್ಣದೀರ್ಘ ಸಂಧಿ<br>(ಸಿ) ಯಣ್ ಸಂಧಿ (ಡಿ) ಅನುನಾಸಿಕ ಸಂಧಿ<br>***ಉತ್ತರ :*** (ಬಿ) ಸವರ್ಣದೀರ್ಘ ಸಂಧಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | 'ಮಾಡು' ಧಾತುವಿನ ಸಂಭಾವನಾರ್ಥಕ ರೂಪ<br>(ಎ) ಮಾಡಲಿ (ಬಿ) ಮಾಡನು<br>(ಸಿ) ಮಾಡಿಯಾನು (ಡಿ) ಮಾಡುವನು<br>***ಉತ್ತರ :*** (ಸಿ) ಮಾಡಿಯಾನು | |
| 48. | 'ಕರ್ಮಧಾರಯ' ಸಮಾಸಕ್ಕೆ ಉದಾಹರಣೆಯಾದ ಪದ<br>(ಎ) ಗಾಂಡೀವಿ (ಬಿ) ಸಾಕ್ಷಿಮಾಡಿ<br>(ಸಿ) ಧನಹರಣ (ಡಿ) ಪೆರ್ಮರ<br>***ಉತ್ತರ :*** (ಡಿ) ಪೆರ್ಮರ | |
| 49. | ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಬೇಕು<br>(ಎ) ಪೂರ್ಣ ವಿರಾಮ (ಬಿ) ಅಲ್ಪ ವಿರಾಮ<br>(ಸಿ) ಅರ್ಧ ವಿರಾಮ (ಡಿ) ಭಾವಸೂಚಕ<br>***ಉತ್ತರ :*** (ಎ) ಪೂರ್ಣ ವಿರಾಮ | |
| 50. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥಹ ವಾಕ್ಯವನ್ನು ಹೀಗೆಂದು ಕರೆಯುತ್ತೇವೆ<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಬಿ) ಮಿಶ್ರ ವಾಕ್ಯ | |
| 51. | ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು ಹೀಗೆಂದು ಕರೆಯಲಾಗಿದೆ<br>(ಎ) ಭಾವಸೂಚಕಾವ್ಯಯ (ಬಿ) ಅನುಕರಣಾವ್ಯಯ<br>(ಸಿ) ಕ್ರಿಯಾರ್ಥಕಾವ್ಯಯ (ಡಿ) ಸಂಬಂಧಾರ್ಥಕಾವ್ಯಯ<br>***ಉತ್ತರ :*** (ಸಿ) ಕ್ರಿಯಾರ್ಥಕಾವ್ಯಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | 'ಬಲಗಾಲಿನಿಂದ' ಎಂಬ ಪದದಲ್ಲಿರುವ ವಿಭಕ್ತಿ<br>(ಎ) ಪ್ರಥಮಾ (ಬಿ) ಸಪ್ತಮೀ<br>(ಸಿ) ಪಂಚಮೀ (ಡಿ) ತೃತೀಯಾ<br>***ಉತ್ತರ :*** (ಡಿ) ತೃತೀಯಾ | |
| 53. | 'ಪೂಜಾರಿ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ<br>(ಎ) ರೂಢನಾಮ (ಬಿ) ಭಾವನಾಮ<br>(ಸಿ) ಅಂಕಿತನಾಮ (ಡಿ) ಅನ್ವರ್ಥನಾಮ<br>***ಉತ್ತರ :*** (ಡಿ) ಅನ್ವರ್ಥನಾಮ | |
| 54. | 'ಅಬ್ಜೋದರ' ಪದದ ಅರ್ಥ<br>(ಎ) ವಿಷ್ಣು (ಬಿ) ಬ್ರಹ್ಮ<br>(ಸಿ) ಶಿವ (ಡಿ) ರಾಮ<br>***ಉತ್ತರ :*** (ಎ) ವಿಷ್ಣು | |
| 55. | 'ಕೃದಂತ ಭಾವನಾಮ' ಪದಕ್ಕೆ ಉದಾಹರಣೆ<br>(ಎ) ಓಡಿ (ಬಿ) ಓಡಿದ<br>(ಸಿ) ಓಟ (ಡಿ) ಓಡುವ<br>***ಉತ್ತರ :*** (ಸಿ) ಓಟ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಸತಿಪತಿ : ಜೋಡುನುಡಿ :: ಮೆಲ್ಲಮೆಲ್ಲನೆ : ......................... .<br>***ಉತ್ತರ :*** ದ್ವಿರುಕ್ತಿ | |
| 57. | ಜಮೀನು : ಫಾರ್ಸಿ :: ತಂಬಾಕು : ......................... .<br>***ಉತ್ತರ :*** ಪೋರ್ಚ್‌ಗೀಸ್ | |
| 58. | ವೈಶಾಖ : ಬೇಸಗೆ :: ಕೋಕಿಲಾ : ......................... .<br>***ಉತ್ತರ :*** ಕೋಗಿಲೆ | |
| 59. | ಜಾಣತನ : ತದ್ಧಿತಾಂತ ಭಾವನಾಮ :: ಬಳೆಗಾರ : ......................... .<br>***ಉತ್ತರ :*** ತದ್ಧಿತಾಂತನಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಏನು ಹೇಳ್ಳೈ ಕರ್ಣ ಚಿತ್ತ

ಗ್ಲಾನಿ ಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

***ಅಥವಾ***

ನೀನುಳ್ಳೊಡೆಲ್ಲರೊಳರೆಮ

ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ ।

***ಉತ್ತರ :***

— U | — — | — U | — —
ಏನು | ಹೇಳ್ಳೈ | ಕರ್ಣ | ಚಿತ್ತ | = ೧೪

— U | — U U | U U U | — —
ಗ್ಲಾನಿ | ಯಾವುದು | ಮನಕೆ | ಕುಂತೀ | = ೧೪

— U | U U U U | — U | — U U | — U | — U U | —
ಸೂನು | ಗಳಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ = ೨೩

ಇದು ಮಾತ್ರಾಗಣ ಛಂದಸ್ಸಿನ 'ಭಾಮಿನಿ' ಷಟ್ಪದಿಯಲ್ಲಿ ರಚಿತವಾಗಿದೆ.

***ಅಥವಾ***

— — | U — U | U U U U
ನೀನು | ಳ್ಳೊಡೆಲ್ಲ | ರೊಳರೆಮ = ೧೨

— U U | — U U | U — U | — U U | U U —
ಗೇನುಮ | ಟಿಲ್ಮನ | ದೊಳಿಲ್ಲ | ದೆಂತೆನೆ | ಮಗನೇ = ೨೦

ಇದು ಮಾತ್ರಾಗಣ ಛಂದಸ್ಸಿನ 'ಕಂದ' ಪದ್ಯದಲ್ಲಿ ರಚಿತವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

"ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ"

***ಅಥವಾ***

"ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ"

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ* : ಸತಿಪತಿಗಳೊಂದಾಗದವನ ಭಕ್ತಿ

*ಉಪಮಾನ* : ವಿಷಬೆರೆತ ಅಮೃತ

*ಉಪಮಾ ವಾಚಕ :* ಅಂತೆ

*ಸಮಾನಧರ್ಮ :* ಲುಪ್ತವಾಗಿದೆ (ವ್ಯರ್ಥ)

ಇಲ್ಲಿ ಸತಿಪತಿಗಳೊಂದಾಗದವನ ಭಕ್ತಿ ಎಂಬ ಉಪಮೇಯವನ್ನು ವಿಷಬೆರೆತ ಅಮೃತ ಎಂಬ ಉಪಮಾನಕ್ಕೆ ಅಂತೆ ಎಂಬ ಉಪಮಾವಾಚಕದ ಮೂಲಕ ಲುಪ್ತವಾದ (ವ್ಯರ್ಥ) ಎಂಬ ಸಮಾನ ಧರ್ಮವನ್ನು ಹೇಳಿ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಲುಪ್ತೋಪಮಾಲಂಕಾರದ ಲಕ್ಷಣವಾಗಿದೆ.

***ಅಥವಾ***

*ಅಲಂಕಾರದ ಹೆಸರು* : ರೂಪಕಾಲಂಕಾರ

*ಲಕ್ಷಣ* : ಅತಿ ಸಾಮ್ಯತೆಯಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ಅಂದರೆ ಎರಡೂ ಒಂದೇ ಎಂದು ವರ್ಣಿಸಿದಾಗ ಅದು ರೂಪಕಾಲಂಕಾರವಾಗುತ್ತದೆ.

*ಸಮನ್ವಯ :* *ಉಪಮೇಯ :* ಒಡಲ ಬೇಗೆ

*ಉಪಮಾನ :* ಬೆಂಕಿಯುರಿ

ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯ ಉರಿಗೆ ಅಭೇದವಾಗಿ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರದ ಲಕ್ಷಣವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | * ಅತಿಯಾಸೆ ಗತಿಕೇಡು | |
| | * ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು | |
| | * ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ. | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಮೈಸೂರಿನ ದೇವಲಾಪುರ ಸರ್ಕಾರಿ ಪ್ರೌಢಶಾಲೆಯ 'ವಿದ್ಯಾಶಂಕರ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ವಿಜ್ಞಾನ ವಸ್ತುಪ್ರದರ್ಶನ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ದಿಗ್ವಿಜಯ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮೈಸೂರಿನ ಮೊರಾರ್ಜಿ ಶಾಲೆಯ ವಿದ್ಯಾರ್ಥಿನಿ 'ಸಹನ' ಎಂದು ಭಾವಿಸಿಕೊಂಡು ಚಾಮರಾಜನಗರದ ಶಂಕರಪುರ ಬಡಾವಣೆಯಲ್ಲಿ ವಾಸವಾಗಿರುವ 'ಶೋಭಾರಾಣಿ' ಎಂಬ ಹೆಸರಿನ ತಾಯಿಯವರಿಗೆ ನಿಮ್ಮ ಪರೀಕ್ಷಾ ಸಿದ್ಧತೆ ಕುರಿತು ಒಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ತಾಯಿಯರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | 1 × 5 = 5 |
| | ∗ ಶಿಕ್ಷಣಾಭಿವೃದ್ಧಿಯಲ್ಲಿ ಆಧುನಿಕ ತಂತ್ರಜ್ಞಾನದ ಮಹತ್ವ | |
| | ∗ ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ | |
| | ∗ ಜಲಮಾಲಿನ್ಯ ಮತ್ತು ಪರಿಹಾರೋಪಾಯಗಳು | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧಕ್ಕೆ | 1 ಅಂಕ |
| | ಒಟ್ಟು | 5 ಅಂಕಗಳು |